SCAP

18 (2)

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರೈತ ಸಂಪರ್ಕ ಕೇಂದ್ರಗಳ ನಿರ್ವಹಣಾ ವೆಚ್ಚವನ್ನು ರೂ. 25.000/- ದಿಂದ ರೂ. 50.000/- ಗೆ ಹೆಚ್ಚಿಸುವ ಬಗ್ಗೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ/113/ಕೃಇಕ/2012, ಬೆಂಗಳೂರು, ದಿ: 18/03/2013.**

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಕೃತೋಇ/116/ಕೃಯೋಕಾ/2001, ದಿ: 17/05/2001.

2) ಕೃಷಿ ಇಲಾಖೆಯ ಏಕ ಕಡತ ಸಂಖ್ಯೆ: ರೈಸಂಕೇ/ತಾಂ-2/ರೈಸಂಕೇ/ನಿರ್ವಹಣಾ ವೆಚ್ಚ/32/2011-12 ಹಾಗೂ ಪತ್ರ ದಿನಾಂಕ: 11/12-10-2012.

## ಪ್ರಸ್ತಾವನೆ

ಮೇಲೆ ಓದಲಾದ (1) ರ ಆದೇಶದಲ್ಲಿ ರೈತ ಮಿತ್ರ ಯೋಜನೆಯಡಿ ರಾಜ್ಯದ ಪ್ರತಿಯೊಂದು ಹೋಬಳಿಯಲ್ಲಿ ಸ್ಥಾಪಿಸಲಾಗಿರುವ ರೈತ ಸಂಪರ್ಕ ಕೇಂದ್ರಗಳಲ್ಲಿ ಲಭ್ಯವಿರುವ ಸೌಲಭ್ಯವನ್ನು ಪಡೆಯಲು ಪ್ರತಿ ಸೌಲಭ್ಯಗಳಿಗೆ ಸೇವಾ ಶುಲ್ಕವನ್ನು ಪಡೆಯಲು / ವಿಧಿಸಲು ಸರ್ಕಾರದ ಮಂಜೂರಾತಿಯನ್ನು ಕೆಲವು ಷರತ್ತುಗಳೊಂದಿಗೆ ನೀಡಲಾಗಿದೆ. ಸದರಿ ಆದೇಶದಲ್ಲಿ ಠೇವಣಿಯಲ್ಲಿರುವ ಹಣವನ್ನು ಕೇಂದ್ರಗಳ ದೈನಂದಿನ ಚಟುವಟಿಕೆಗಳಿಗೆ ಅವಶ್ಯವಿರುವ ಅಂದರೆ ಬೀಜ ಮತ್ತು ಮಣ್ಣು ಮಾದರಿಗಳ ಪರೀಕ್ಷೆಗಾಗಿ ಬೇಕಾಗಿರುವ ಪರಿಕರಗಳನ್ನು ಕೊಳ್ಳಲು ಹಾಗೂ ಈ ರೈತ ಸಂಪರ್ಕ ಕೇಂದ್ರಗಳು ಸರ್ಕಾರದ / ಇಲಾಖೆಯ ಸ್ವಂತ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಲ್ಲಿ ಅವುಗಳ ರಿಪೇರಿ / ನಿರ್ವಹಣೆಗಾಗಿ ವಾರ್ಷಿಕ 25.000/- ರೂ.ಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ರಲ್ಲಿನ ನಿಯಮಗಳ ಪ್ರಕಾರ ವೆಚ್ಚ ಮಾಡಲು ಆದೇಶಿಸಲಾಗಿದೆ.

ಮೇಲೆ ಓದಲಾದ (2)ರ ಪತ್ರದಲ್ಲಿ ಕೃಷಿ ನಿರ್ದೇಶಕರು ಪ್ರಸ್ತುತ ರೈತ ಸಂಪರ್ಕ ಕೇಂದ್ರಗಳ ನಿರ್ವಹಣಾ ವೆಚ್ಚ ಹೆಚ್ಚಾಗಿರುವುದರಿಂದ ಹಾಗೂ ರೂ. 25.000/-ಗಳ ಮಿತಿಯನ್ನು ಹತ್ತು ವರ್ಷಗಳ ಹಿಂದೆ ನಿಗದಿ ಮಾಡಿರುವ ಹಿನ್ನೆಲೆಯಲ್ಲಿ ರೈತ ಸಂಪರ್ಕ ಕೇಂದ್ರಗಳ ನಿರ್ವಹಣೆಗಾಗಿ ವೆಚ್ಚವನ್ನು ವಾರ್ಷಿಕ ರೂ. 25.000/- ಗಳಿಂದ ರೂ. 50.000/- ಗಳಿಗೆ ಹೆಚ್ಚಿಸಲು ಹಾಗೂ ರೈತ ಸಂಪರ್ಕ ಕೇಂದ್ರದಲ್ಲಿ ಸಂಗ್ರಹಣೆಯಾಗುವ ಮೊತ್ತದಿಂದ ರೈತ ಸಂಪರ್ಕ ಕೇಂದ್ರಗಳ ನಿರ್ವಹಣೆಗಾಗಿ ಹಂಗಾಮುಗಳಲ್ಲಿ ನಿಯಮಾನುಸಾರ ನೇಮಕ ಮಾಡಿಕೊಳ್ಳುವ ಸಿಬ್ಬಂದಿಗಳಿಗೆ ವೇತನವನ್ನು ಪಾವತಿಸಲು ಅನುಮತಿಸಿ ಸರ್ಕಾರದ ಆದೇಶ ಹೊರಡಿಸಲು ಕೋರಿರುತ್ತಾರೆ.

ಮೇಲಿನ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

..2..

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಕೃತೋಇ/116/ಕೃಯೋಕಾ/2001, ದಿ: 17-05-2001 ರಲ್ಲಿನ ಷರತ್ತು 2 ರಲ್ಲಿ ನಿಗಧಿಪಡಿಸಿರುವ ರೈತ ಸಂಪರ್ಕ ಕೇಂದ್ರಗಳ ನಿರ್ವಹಣಾ ವೆಚ್ಚವನ್ನು ವಾರ್ಷಿಕ ರೂ. 25,000/- ದಿಂದ ರೂ. 50,000/-ದಳಿಗೆ ಪರಿಷ್ಕರಿಸಿ ಆದೇಶಿಸಿದೆ. ಈ ವೆಚ್ಚವನ್ನು ರೈತ ಸಂಪರ್ಕ ಕೇಂದ್ರಗಳಲ್ಲಿ ಸಂಗ್ರಹಣೆಯಾಗುವ ಸೇವಾ ಶುಲ್ಕದಿಂದ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: FD/381/Exp-4/2012.. ದಿ: 01-03-2013 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಜೆ.ಆರ್. ವಿಶ್ವನಾಥಾಚಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ)

<u>ಇವರಿಗೆ,</u>

1. ಮಹಾಲೇಖಪಾಲರು, (ಲೆಕ್ಕ ಪತ್ರ ಮತ್ತು ಲೆಕ್ಕ ಪರಿಶೋಧನೆ) ಕರ್ನಾಟಕ, ಬೆಂಗಳೂರು.
2. ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
3. ಆಯುಕ್ತರು/ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
4. ನಿರ್ದೇಶಕರು, ~~ರಾಜ್ಯ ಹುಜೂರು~~ ಖಜಾನೆ, ಬೆಂಗಳೂರು.
5. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
6. ಸರ್ಕಾರದ ಉಪಕಾರ್ಯದರ್ಶಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಕೃತೋ. ಮತ್ತು ಪ.ಸ.ಮೀ. ಇಲಾಖೆ, ಬೆಂಗಳೂರು.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

<u>ಪ್ರತಿ:</u>

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬೆಂಗಳೂರು.
2. ಸರ್ಕಾರದ ಉಪ ಕಾರ್ಯದರ್ಶಿಗಳ ಆಪ್ತ ಸಹಾಯಕರು, ಕೃಷಿ ಇಲಾಖೆ, ಬೆಂಗಳೂರು.